
ಪದಬಂಧ



ಎಡದಿಂದ ಬಲಕ್ಕೆ :

1. ನದಿಗಳ ಸಂಗಮದ ಬಳಿ ಎಲ್ಲ ಮಿತ್ರರ ಒಕ್ಕೂಟ (4)
3. ಅಹಂಕಾರ ಕೈ ಬಿಟ್ಟರಷ್ಟೇ ಮೇಲೇರಬಹುದು (3)
4. ಮುಂದಕ್ಕೆ ಹೋಗಬೇಕೆಂದರೆ ಕೆಳಕ್ಕೆ ಹಾರು (3)
6. ಜಾತ್ರೆಗಾಗಿ ಬಂದವರ ಕೂಡ ಆಗಮಿಸಿದ ಸಹವರ್ತಿ (4)
7. ಬಿಗಿಯಾಗಿ ತಿರುಗಿಸುವ ಸಾಧನವನ್ನು ಈ ರಾಶಿಯಲ್ಲಿ ಪತ್ತೆ ಹಚ್ಚು (4)
9. ಹೊಲದ ಬೇಲಿಯನ್ನೂ ಹಾರಲಾರ ಬಿಡಿ, ಶಕ್ತಿಯೇ ಇಲ್ಲದವ (4)
11. ಮಳೆ ಬರುವುದನ್ನೇ ಕಾಯುತ್ತಿದೆ ' ಶ್ವೇತ ಗೃಹ ' (4)
13. ದುರ್ದೆಶೆಯ ಈ ಕಟ್ಟುಕತೆಗೆ ಕೆಟ್ಟ ಗುರಿ ಇದೆ (4)
15. ಆಕಾಶವನ್ನು ವೀಕ್ಷಿಸುವಾಗ ವ್ಯವಧಾನ ಇರಲಿ (4)
17. ಪತ್ತೇದಾರನಾಗಲು ಹೊರಟಿದ್ದಾನೆ ಭಾರೀ ಪೆದ್ದ (3)
18. ಬಂಡಾಯ ಅಡಗಿಸಬಲ್ಲನೆಂಬ ಅವನ ಮಾತೆಲ್ಲ ಬರೀ ಜಂಬ (3)
19. ದಾಸರ ವಿಚಾರಗಳನ್ನು ಅನುಸರಿಸುವುದು ಒಳ್ಳೆಯ ನಡೆವಳಿಕೆ (4)

ಮೇಲಿಂದ ಕೆಳಕ್ಕೆ :

1. ಹೊಸ ಜನರ ನಡುವೆ ಮುಜುಗರವಾಗುವುದು ನೈಸರ್ಗಿಕವೇ ಬಿಡಿ (3)
2. ಮಂದ್ರ ಸ್ವರಗಳ ಈ ಸಂಯೋಜನೆ ಎಷ್ಟು ಸವಿ ! (3)
3. ಅಣ್ಣನ ಮಾತೆಂದರೆ ಆಜ್ಞೆ ಇದ್ದಂತೆಯೇ ಹೌದಲ್ಲ ? (3)
5. ಶೋಕವೇನೂ ಇಲ್ಲ, ಎಲ್ಲ ಕ್ಷೇಮ (3)
7. ಆತ ಬಲಗೈಯಲ್ಲಿ ಹಿಡಿದಿರುವುದು ಪ್ರೇಮ ಕುಸುಮ ತಾನೇ ? (3)
8. ಮೊಸರನ್ನವನ್ನು ಹಂಚಿದ್ದರಲ್ಲಿ ಏನೂ ಉದ್ದೇಶ ಇಲ್ಲ (3)
9. ತುಂಬಿತ್ತು ಭಾರೀ ದಬರಿ; ಈಗ ಪೂರ್ತಿ ಖಾಲಿ (3)
10. ಶೂರನನ್ನೂ ಕಾಪಾಡುವವ ' ಮನುಷ್ಯರ ಒಡೆಯ'ನೇ ತಾನೇ? (3)
12. ಮಾತೆಯಲ್ಲವೇ ಮತ್ತೆ, ಅದಕ್ಕೇ ಇಂತಹ ವಾತ್ಸಲ್ಯ (3)
14. ವ್ಯಾಪಾರಿಯ ಕೈ ತುಂಬ ನಮ್ಮ ದೇಶದ್ದೇ ದುಡ್ಡು (3)
15. ಸಂಸಾರ ನಡೆಸುತ್ತಿದೆ ನೋಡಿ, ಸುಂದರ ನೀರ ಹಕ್ಕಿ (3)
16. ಸಭಾಸದರ ಮಧ್ಯೆಯೇ ಒಬ್ಬ ಬೇಡನೂ ಇದ್ದಾನೆ (3)

### 18-5-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ನರೋತ್ತಮ 3. ಸವಾಲು 4. ಜತನ 6. ಗುಡಿಸಲು 7. ಬಾಲಕ 9. ಮುರುಕು 11. ರಹಸ್ಯ 13. ನಕುಲ 15. ಬೇರುಬಿಡು 17. ದಿನಾಂಕ ; 18. ಮುಸಲ 19. ರಿದಾರುಕಿ ( ಕಿರುದಾರಿ ಹಿಂದು ಮುಂದು)

ಮೇಲಿಂದ ಕೆಳಕ್ಕೆ :

1. ನರುಗು ( = ಸುವಾಸನೆ ) 2. ಮಜಲು 3. ಸಡಿಲ 5. ನಜರು 7. ಬಾತ್ಮೀದಾರ 8. ಕಳೆಸಸ್ಯ 9. ಮುದಿತನ 10. ಕುತೂಹಲ 12. ಹಳದಿ 14. ಕುಟಿಲ 15. ಬೇಕರಿ 16. ಡುಮಕಿ


## ಪ್ರಶ್ನಾಂಕಣ

# ಕಾರ್ಸ್ಟ್ ಎಂದರೇನು?

ಕಾರ್ಸ್ಟ್, ಅದೊಂದು ಅತಿ ವಿಶಿಷ್ಟ ಬಗೆಯ ಭೂ ಪ್ರದೇಶ. ಸ್ಲೇವಿಕ್ ಭಾಷೆಯ ಈ ಪದಕ್ಕೆ ಬಂಜರು ಅಥವಾ ಬಂಡೆ ಪ್ರದೇಶ ಎಂದರ್ಥ. ಹಾಗೆಂದು ಕಾರ್ಸ್ಟ್ ಎಂಬುದು ಮರುಭೂಮಿ ಅಲ್ಲ. ವಾಸ್ತವವಾಗಿ ಕಾರ್ಸ್ಟ್ ಪ್ರದೇಶಗಳಲ್ಲಿ ಸಾಧಾರಣ ಅಥವಾ ಭಾರೀ ಪ್ರಮಾಣದ ಮಳೆಯೇ ಸುರಿಯುತ್ತದೆ. ಆದರೂ ಅದು ಬಂಜರಾಗಿಯೇ ಉಳಿದಿರುತ್ತದೆ. ಅದಕ್ಕೆ ಮುಖ್ಯ ಕಾರಣ ಕಾರ್ಸ್ಟ್ ಗಳ ನೆಲವೆಲ್ಲ ಸುಣ್ಣಶಿಲೆ ಅಥವಾ ಡಾಲೋಮೈಟ್ ಶಿಲೆಯಿಂದಾಗಿರುತ್ತದೆ. ಸುಲಭವಾಗಿ ನೀರಲ್ಲಿ ಕರಗುವ ಮತ್ತು ಕ್ಷಿಪ್ರವಾಗಿ ಶಿಥಿಲೀಕರಣಗೊಳ್ಳುವ ಈ ಶಿಲಾಸ್ತರಗಳಲ್ಲಿ ಸಹಜವಾಗಿಯೇ ಹೇರಳ ಬಿರುಕುಗಳು ಮೇಲಿಂದ ಕೆಳಕ್ಕೂ, ಅಡ್ಡನಾಗಿಯೂ, ಉದ್ದವಾಗಿಯೂ ಹರಡಿರುತ್ತವೆ.

ಸ್ಪಷ್ಟವಾಗಿಯೇ ಇಂತಹ ಪ್ರದೇಶಗಳಲ್ಲಿ ಸುರಿವ ಮಳೆ ನೀರೆಲ್ಲ ಬೇಗ ಬೇಗ ನೆಲದ ಬಿರುಕುಗಳಲ್ಲಿ ಕೆಳಕ್ಕಿಳಿದು ಅಂತರ್ಜಲ ಧಾರೆಗಳಂತೆ ಹರಿಯತೊಡಗುತ್ತದೆ. ಹಾಗೆ ಹರಿಯುತ್ತ, ಹರಿಯುತ್ತ, ಸುಣ್ಣ ಶಿಲೆಯನ್ನು ಕರಗಿಸುತ್ತ, ಬಿರುಕುಗಳನ್ನು ಅಗಲಗೊಳಿಸುತ್ತ ಪ್ರವಹಿಸುತ್ತದೆ. ತತ್ಪರಿಣಾಮವಾಗಿ ನೆಲದೊಳಗೆ ಅಂತರ್ಜಲ ಧಾರೆಗಳ ಸಂಕೀರ್ಣ ವ್ಯೂಹವೇ ಏರ್ಪಡುತ್ತದೆ. ಕ್ರಮೇಣ ನೆಲದೊಳಗೆ ಅಗೋಚರ ನದಿಗಳೇ ರೂಪುಗೊಂಡು ಭಾರೀ ಗುಹೆಗಳೇ ಮೈದಳೆಯುತ್ತವೆ ; ಸಾವಿರಾರು ವರ್ಷಗಳಲ್ಲಿ ಚಿತ್ತಾರ ಭರಿತ ಸ್ತಂಭಬಿಳಿಲುಗಳಿಂದ ಅಲಂಕರಣಗೊಳ್ಳುತ್ತವೆ ಕೂಡ. ಹಾಗೆ ಗುಹೆಗಳನ್ನು ಕೊರೆದು ಮುನ್ನಡೆವ ನದೀ ಪ್ರವಾಹಗಳು ಮುಂದೆಲ್ಲೋ ಚಿಲುಮೆಗಳಾಗಿ ಉಕ್ಕಿ ಹರಿಯುತ್ತವೆ ; ಮತ್ತೆ ನೆಲಕ್ಕಿಳಿಯುತ್ತವೆ. ಬಹುಕಾಲ ಕಳೆವ ವೇಳೆಗೆ ಕೆಲವಾರು ನೆಲಾಂತರ್ಗತ ಗುಹೆಸುರಂಗಗಳ ಚಾವಣಿಗಳು ಕುಸಿದು ಅಲ್ಲಲ್ಲ ಭಾರೀ ಆಳದ ಕಣಿವೆಗಳು ತೆರೆದುಕೊಳ್ಳುತ್ತವೆ. ಕಾರ್ಸ್ಟ್ ಗಳ ಕಡಲಂಚಿನ ಪ್ರದೇಶಗಳು ಸಾಗರದ ಅಲೆಗಳ ಎಡೆಬಿಡದ ತಾಡನದ ಪ್ರಭಾವದಿಂದ ಬುಡದ ಭಾಗಗಳಲ್ಲಿ ಚಿತ್ರವಿಚಿತ್ರವಾಗಿ ಕೊರೆಯಲ್ಪಟ್ಟು ಚಿತ್ತಾಕರ್ಷಕ, ಅದ್ಭುತ ರೂಪಗಳನ್ನುತಳೆಯುತ್ತವೆ ( ಚಿತ್ರಗಳಲ್ಲಿ ಗಮನಿಸಿ ).

ಕಾರ್ಸ್ಟ್ ಪ್ರದೇಶಗಳಲ್ಲಿ ನೆಲದ ಮೇಲಿನ ಜಲದ ಸೆಲೆಗಳು, ಎಂದರೆ ನದಿ, ಸರೋವರ, ಕೆರೆ ಇತ್ಯಾದಿ ಜಲಾವಾರಗಳು ಬಹಳ ಅಪರೂಪ. ಅಷ್ಟೇ ಅಲ್ಲದೆ




ಫಲವತ್ತಾದ, ದಪ್ಪನಾದ ಮಣ್ಣಿನ ಪದರದಿಂದ ಕೂಡಿದ ನೆಲ ಕೂಡ ಬಹು ವಿರಳ. ಹಾಗಾಗಿ ಕಾರ್ಸ್ಟ್ ಗಳು ಅಡವಿಗಳಿಗೆ, ನಿಬಿಡ ಸಸ್ಯಾಚ್ಛಾದನೆಗೆ ಮತ್ತು ಸಮೃದ್ಧ ಕೃಷಿಗೆ ಪ್ರಶಸ್ತವಲ್ಲ. ಹಾಗಿದ್ದೂ ಧರೆಯ ಶೇಕಡ ಇಪ್ಪತ್ತೈದರಷ್ಟು ಜನ ಕಾರ್ಸ್ಟ್ ಪ್ರದೇಶಗಳನ್ನೇ ನೀರಿಗೆ, ವಾಸಕ್ಕೆ ಅವಲಂಬಿಸಿದ್ದಾರೆ.

ಅದೆಲ್ಲ ಏನೇ ಆದರೂ ಅಂಟಾರ್ಕ್ಟಿಕಾವನ್ನು ಬಿಟ್ಟು ಉಳಿದ ಎಲ್ಲ ಭೂಖಂಡಗಳಲ್ಲೂ ಕಾರ್ಸ್ಟ್ ಗಳು ಅತಿ ಮನೋಹರ ನಿಸರ್ಗ ದೃಶ್ಯಗಳನ್ನು ರೂಪಿಸಿವೆ. ಚೀನಾದ ಗ್ವೈಲಿನ್ ಬೆಟ್ಟಗಳು, ಥಾಯ್ಲಂಡ್ ನ ಫೇಂಗಾ ಬೇ, ಯು. ಎಸ್.ಎ ಯ ಕಾರ್ಲ್ಸ್ ಬಾಡ್ ಗುಹಾ ವ್ಯೂಹ, ನ್ಯೂಝಿಲಂಡ್ ನ ವಾಯಿಟೋಮೋ ಗುಹೆಗಳು, ಫಿಲಿಪ್ಪೀನ್ಸ್ ನ ಚಾಕೊಲೇಟ್ ಗುಡ್ಡಗಳು ... ಇತ್ಯಾದಿ ಎಲ್ಲವೂ ಸುಪ್ರಸಿದ್ಧ ಕಾರ್ಸ್ಟ್ ಭೂ ಪ್ರದೇಶಗಳೇ ಆಗಿವೆ.

■ ಎನ್. ವಾಸುದೇವ್